ಒಂದೊಂದೇ ಅಗುಳನ್ನು ಕಷ್ಟಪಟ್ಟು ತಿನ್ನುತ್ತಾ ಇದ್ದ ಅವನ ಪಕ್ಕ ಆಗಲೇ ಎರಡು ಸುತ್ತು ಮುಗಿಸಿ ಮೂರನೇ ಸುತ್ತು ಅನ್ನ ಹಾಕಿಕೊಂಡು ಬಂದಿದ್ದ ರಾಜೀವ ಕೂತು, 'ಅಲ್ಲ ಮಗಾ, ಹೋಗೀ ಹೋಗೀ ಸೀನಿಯರ್ರ್ಗೆ ಯಾವ್ದೋನಾದ್ರೂ ಏಕವಚನದಲ್ಲಿ ಮಾತಾಡಿಸ್ತಾನಾ, ಗೊತ್ತಾಗಲ್ವಾ ನಿಂಗೆ?' ಎಂದು ಅವನ ನೋವು ಹೆಚ್ಚಿಸಿದ. ವಿನಯ ಇದ್ದವನು 'ಇವೆಲ್ಲಾ ಏನೂ ಅಲ್ಲ, ನಾನ್ ಪಿಯು ಹಾಸ್ಟೆಲಲ್ಲಿದ್ದಾಗ ಸೀನಿಯರ್ರು ಅವರ ಬಟ್ಟೇನೆಲ್ಲಾ ನಮ್ ಕೈಲಿ ತೊಳೆಸ್ತಿದ್ರು, ಬ್ಯಾಡ ಬ್ಯಾಡ ಅಂದ್ರೂ ಸಿಗರೇಟ್ ಹೊಡಿಯಕ್ ಹೇಳ್ತಿದ್ರು, ಅವ್ರು ಎಣ್ಣೆ ಹೊಡ್ದು ವಾಂತಿ ಮಾಡಿದ್ದನ್ನ ನಾವ್ ಒರೆಸ್ಬೇಕಾಗಿತ್ತು ಗೊತ್ತಾ. ಅದರ ಮುಂದೆ ಇದು ಸ್ವರ್ಗ, ಓವರ್ರ್ಯಾಕ್ಟಿಂಗ್ ಮಾಡ್ಬೇಡ, ಊಟ ಮಾಡು' ಎಂದು ಗದರಿದ. ಸಂದೀಪ ಮಂಕಾಗಿದ್ದನ್ನು ನೋಡಿದ ವಿನಯ ಸಮಾಧಾನಪಡಿಸಲೆಂದು 'ಡ್ಯಾನ್ಸ್ ಚೆನಾಗ್ ಮಾಡ್ದೆ ಮಗಾ, ಮಜಾ ಬಂತು' ಎಂದಾಗ ಸಂದೀಪನಿಗೆ ತಡೆಯಲಾಗಲಿಲ್ಲ. ತಟ್ಟೆಯಲ್ಲಿ ಉಳಿದಿದ್ದ ಅನ್ನವನ್ನು ಬಕೆಟ್ಟಿಗೆ ಚೆಲ್ಲಿ ಕೈ ತೊಳೆದುಕೊಂಡು ರೂಮಿಗೆ ಹೋಗಿ ಬೆಡ್‌ಶೀಟ್ ಹೊದ್ದುಕೊಂಡು ಮಲಗಿ ಜೋರಾಗಿ ಅತ್ತ. ಮಾರನೆಯ ದಿನ ಸಂದೀಪನಿಗೆ ಜ್ವರ ಬಂತು. ಅಲ್ಲಿಂದ ಅವನ ನಿಜವಾದ ಹಾಸ್ಟೆಲ್ ಜೀವನ ಶುರುವಾಯಿತು.

ಊಟ ಮುಗಿಸಿದ ಸಂದೀಪ, ಡಾಕ್ಟರು ಕೊಟ್ಟ ಮಾತ್ರೆ ಟಾನಿಕ್ಕುಗಳನ್ನು ತಿಂದು ಗಾಯವಾಗದ ಗೀರುಗಳನ್ನು ನೋಡಿಕೊಳ್ಳುತ್ತಾ ನಟೇಶನ ಕೋಣೆಗೆ ಹೋಗುವಷ್ಟರಲ್ಲಿ ಅಲ್ಲಿ ಆಗಲೇ ಥರ್ಮಾಕೋಲ್ ಬೋರ್ಡಿನ ಮೇಲೆ ಚಿತ್ತಾರವನ್ನು ಕೆತ್ತುವ ಕೆಲಸ ಶುರುವಾಗಿತ್ತು. ಇನ್ನೇನು ಒಂದೇ ತಿಂಗಳು, ಅರಿಹಂತನೂ ಸೇರಿದಂತೆ ಇಡೀ ವರ್ಷ ನಮ್ಮನ್ನು ಕಾಡಿದ ಸೀನಿಯರುಗಳು ಬಿಟ್ಟು ಹೋಗುತ್ತಾರೆಂಬ ಯೋಚನೆ ತಲೆಯಲ್ಲಿ ಬಂದೊಡನೆ ಸಂದೀಪನ ಮನಸ್ಸಲ್ಲಿ ಮತ್ತೆ ಹುರುಪು ಮೂಡಿತು. 'ಆ ಲೆಟರ್ಸನ್ನ ಇನ್ನೊಂಚೂರ್ ನೀಟಾಗ್ ಕಟ್ ಮಾಡ್ಬೇಕು, ಚಿಣಿಮಿಣಿ ಇನ್ನೊಂಚೂರ್ ಹಾಕಣ, ಚೆನಾಗ್ ಕಾಣ್ಲಿ' ಎನ್ನುತ್ತಾ ಅವನೂ ಅಲಂಕಾರಕ್ಕೆ ಸೇರಿಕೊಂಡ. ಪ್ರತೀ ವರ್ಷ ಪದವಿ ಮುಗಿಸಿ ಹೊರಗೆ ಹೋಗುವ ಸೀನಿಯರುಗಳಿಗೆ ಹಾಸ್ಟೆಲ್‌ನ ಉಳಿದ ವರ್ಷದ ಹುಡುಗರು ಸೇರಿಕೊಂಡು ಫೇರ್‌ವೆಲ್ ಕೊಡುತ್ತಾರೆ. ಅದಕ್ಕೆ ಯಾವ ಯಾವ ಆಟಗಳನ್ನು ಆಡಿಸಬೇಕು, ಊಟ ಎಲ್ಲಿಂದ ತರಿಸಬೇಕು, ಸೀನಿಯರುಗಳಿಗೆ ಗಿಫ್ಟ್ ಏನು ಕೊಡಬೇಕು ಇವನ್ನೆಲ್ಲಾ ಎರಡನೇ ಮತ್ತು ಮೂರನೇ ವರ್ಷದ ಹುಡುಗರು ನಿರ್ಧರಿಸುತ್ತಾರೆ. ಹಾಸ್ಟೆಲ್ಲನ್ನು ಗುಡಿಸಿ ಸ್ವಚ್ಛ ಮಾಡುವುದು, ವೇದಿಕೆಯನ್ನು ನಿರ್ಮಿಸುವುದು, ಅಲಂಕಾರ ಮಾಡುವುದು, ಬೋರ್ಡು ಬರೆಯುವುದು ಇವೆಲ್ಲಾ ಜ್ಯೂನಿಯರುಗಳ ಕೆಲಸ.

ದೊಡ್ಡ ಬಿಳೀ ಥರ್ಮಾಕೋಲ್ ಮೇಲೆ ಒಂದೊಂದೇ ಅಕ್ಷರಗಳನ್ನು ಅಂಟಿಸುತ್ತಾ ಹೋದ ಸಂದೀಪನಿಗೆ ಇದ್ದಕ್ಕಿದ್ದಂತೆ ಕೆಳಗೆ ಯಾರೋ ಕಿರುಚಾಡುತ್ತಿರುವ ಸದ್ದು ಕೇಳಿಸಿತು. ಅಲ್ಲಿರುವ ಉಳಿದ ಹದಿನೈದು ಹುಡುಗರಿಗೆ ಅದರ ಬಗ್ಗೆ ಕಿವಿಯಿಲ್ಲ. ಇವನಿಗೆ ಮಾತ್ರ ಕೇಳಿಸುತ್ತಿದೆ. ಈಗ್ಗೆ ಮೂರ್ನಾಲ್ಕು ವಾರದಿಂದ ನಿದ್ರೆಯಲ್ಲೆಲ್ಲಾ ಕರಿಬೆಕ್ಕಿನ ಮುಖ, ಆ ಮಿಯಾಂವ್ ಶಬ್ದ ಕೇಳಿದ್ದರಿಂದ ಯಾವುದೇ ಸಣ್ಣ ಸದ್ದಾದರೂ ಸಂದೀಪನಿಗೆ ಕೇಳಿಸುತ್ತದೆ. ಆ ಕಿರುಚಾಟದ ಆರ್ಭಟ ತಡೆಯಲಾರದೇ ನಿಧಾನಕ್ಕೆ ಅಲ್ಲಿಂದ ಎದ್ದು ಹೊರಟ. ನಿಧಾನಕ್ಕೆ ಮಹಡಿಯ ಮೆಟ್ಟಿಲುಗಳನ್ನು ಇಳಿದು ಕೆಳಗೆ ಬಂದವನು ಸದ್ದು ಬರುತ್ತಿರುವ ಕಡೆಗೆ ಹೆಜ್ಜೆ ಹಾಕಿದ. ಬಾಗಿಲು ಹಾಕಿದ್ದ ಅಡುಗೆಮನೆಯನ್ನು ದಾಟಿಕೊಂಡು ನಿಧಾನಕ್ಕೆ ಮುಂದೆ ಬಂದ ಸಂದೀಪನಿಗೆ ಕೂಗು ಅರಿಹಂತನ ಕೋಣೆಯಿಂದ ಬರುತ್ತಿರುವುದು ಎಂದು ಸ್ಪಷ್ಟವಾಯಿತು. ರಾತ್ರಿಯಾಗಿದ್ದರಿಂದ ಕಾರಿಡಾರಿನಲ್ಲಿ ಯಾರೂ ಓಡಾಡುತ್ತಿರಲಿಲ್ಲ. ಮೆಲ್ಲಗೆ ಹೆಜ್ಜೆ ಇಟ್ಟು ಕೋಣೆಯ ಎದುರು ಬಂದು ನಿಂತ ಸಂದೀಪನಿಗೆ ಒಳಗೆ ಅರಿಹಂತ ಫೋನಿನಲ್ಲಿ ಮಾತನಾಡುತ್ತಿರುವುದು ಕೇಳಿತು. 'ಇಲ್ಲ ಅಪ್ಪಾ, ಎಲ್ಲಾ ಕಡೆ ಹುಡುಕ್ದೆ, ಕಾಲೇಜಲ್ಲೂ ಇಲ್ಲ, ಬೈಬೇಡಿ... ನಾನ್ ಕರೆಕ್ಟಾಗೇ ಎತ್ತಿ ಇಟ್ಕೊಂಡಿದ್ದೆ... ಇಲ್ಲ ಜಾಯ್ನಿಂಗಿಗಿಂತ ಮುಂಚೆ ಕೊಡದೇ ಇದ್ರೆ ಸೆಲೆಕ್ಷನ್ ಕ್ಯಾನ್ಸಲ್ ಮಾಡ್ತಾರಂತೆ, ಏನ್ ಮಾಡ್ಬೇಕು ಅಂತ ಗೊತ್ತಾಗ್ತಿಲ್ಲ ಅಪ್ಪಾ' ಎಂದು ಅರಿಹಂತ ಭಯಪಟ್ಟುಕೊಂಡು ಹೇಳುತ್ತಿರುವುದನ್ನು ಕೇಳಿದ ತಕ್ಷಣ ಸಂದೀಪನಿಗೆ ಕೈಕಾಲುಗಳು ಮರಗಟ್ಟಿದಂತಾದವು. ಕೈಯಲ್ಲಿದ್ದ ಗಾಯ ಮತ್ತೆ ಚುಳ್ ಎಂದು ನೋಯಲು ಶುರುವಾಯಿತು. ಕಷ್ಟಪಟ್ಟು ಅಲ್ಲಿಂದ ಹೆಜ್ಜೆ ಎತ್ತಿ ಇಟ್ಟು ಈ ಕಡೆ ತಿರುಗಿದರೆ ಅಲ್ಲಿ ಕಾರಿಡಾರಿನ ಇನ್ನೊಂದು ಅಂತ್ಯದಲ್ಲಿ ಕರಿಬೆಕ್ಕು